18 ಲಕ್ಷ ರೈತರ ಖಾತೆಗೆ ಬೆಳೆ ಹಾನಿ ಹೆಚ್ಚುವರಿ ಪರಿಹಾರ ಬಿಡುಗಡೆ

1135 ಕೋಟಿ ಜಮೆ ಶುರು | ಬಾಕಿ ಇರೊರಿಗೂ ಪರಿಹಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಳೆ ಹಾನಿಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಘೋಷಿಸಿದ್ದ ಪರಿಹಾರ ಬಿಡುಗಡೆಯಾಗಿದ್ದು, ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾವಣೆ ಪ್ರಕ್ರಿಯೆ ಆರಂಭಗೊಂಡಿದೆ. ರಾಜ್ಯದ 18.02 ಲಕ್ಷ ರೈತರಿಗೆ 1135.58 ಕೋಟಿ ರು. ಪಾವತಿ ಆರಂಭಗೊಂಡಿದೆ. ಜೊತೆಗೆ ಕಳೆದ ಬಾರಿ ಮಾಹಿತಿ ಅಪ್‌ಲೋಡ್ ಆಗಿ ಕೆಲ ಕಾರಣಗಳಿಂದ ಪರಿಹಾರ ಪಾವತಿ ಆಗದವರನ್ನೂ ಪರಿಗಣಿಸಿರುವುದು ವಿಶೇಷವಾಗಿದೆ.

ಬೆಳೆ ಹಾನಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ(ಎನ್‌ಡಿಆರ್‌ಎಫ್)ಯಡಿ ಪಾವತಿಸುತ್ತಿದ್ದ ಹಣ ಕಡಿಮೆಯಾಯಿತು ಎಂಬ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಘೋಷಣೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದರು. ಎನ್‌ಡಿಆರ್‌ಎಫ್‌ನಡಿ ಹೆಕ್ಟೇರ್ ಒಣ ಭೂಮಿಗೆ ನೀಡುತ್ತಿದ್ದ 6800 ರು. ಪರಿಹಾರದ ಜೊತೆಗೆ ರಾಜ್ಯ ಸರ್ಕಾರದಿಂದ 6800 ರು., ಹೆಕ್ಟೇರ್ ನೀರಾವರಿ ಭೂಮಿಗೆ ಕೊಡುತ್ತಿದ್ದ 13,500 ಜೊತೆಗೆ 11,500 ಹಾಗೂ ತೋಟಗಾರಿಕಾ ಬೆಳೆಗಳಿಗೆ ನೀಡುತ್ತಿದ್ದ 18,000 ರುಪಾಯಿ ಜೊತೆಗೆ 10 ಸಾವಿರ ರುಪಾಯಿ ಹೆಚ್ಚುವರಿ ಪರಿಹಾರ ನೀಡುವುದಾಗಿ ಘೋಷಿಸಿದ್ದರು. ಅದರಂತೆ ಗುರುವಾರದಿಂದಲೇ ರೈತರ ಬ್ಯಾಂಕ್ ಖಾತೆಗೆ ಪರಿಹಾರ ಸಂದಾಯವಾಗುತ್ತಿದೆ.

ಯಾರಿಗೆ ಎಷ್ಟು? (ಹೆಕ್ಟೇರ್‌ಗೆ)

ಬೆಳೆ	ಹಿಂದೆ	ಈಗ
ಒಣಭೂಮಿ	₹6800	₹13600
ನೀರಾವರಿ	₹13500	₹25000
ತೋಟಗಾರಿಕೆ	₹18000	₹28000

ಪೈ.8ರಂದು ಕನ್ನಡಪ್ರಭ ಈ ಕುರಿತು ವರದಿ ಮಾಡಿತ್ತು.



12-02-2022 Kp Pg 08

12-02-2022 Dec Hrd Pg 11

Suranga: Tunnelling the earth for water

The traditional suranga meets the water needs of hundreds of villages in Dakshina Kannada and Kasargod, writes Naina J A

For four decades, Mahalinga Naik has used a traditional water management system to sustain his coconut and areca nut orchard in Dakshina Kannada. Naik was awarded the Padma Shri earlier this month for his "innovative, zero-energy micro-irrigation system".

At his farm, water oozes out of a small pipe attached to a narrow tunnel, filling up a storage tank. Called the 'Suranga' or tunnel system, this water management system has adopted by several farmers in the hilly areas of Kasargod and parts of interior Dakshina Kannada.

"The suraganga has survived the test of time and is a lifeline for people," says Shree Padre, an exponent of rainwater harvesting.

Surangas are excavated horizontally, either across a hillock or below the depth of an existing open well. During the monsoon, there is an increased flow of water in the Suranga when compared to the summer, but it rarely runs dry.





(From L - R): A suranga being dug; a local poses with a completed surangana; 'Tunnel man' Mahalinga Naik near a tank that stores water from the suranga. PHOTOS BY SHREE PADRE & DH PHOTO

"After the suranga was dug more than 40 years ago, I haven't faced water shortage, even when there was scanty rainfall in the region," Naik says.

For farmers like Naik, the suranga was a sustainable option as he did not have the means to dig an open well nor sink a borewell.

The suranga is measured in units of kolu (2.5 feet) and is normally two feet wide and six feet high. However, its length varies anywhere between 10 metres to 300 metres.

Shree Padre says there could be around 10,000 surangas in Kasargod alone. There are some villages like Padre where 100 houses depend on the suranga to meet all their water requirements.

A 300-metre-long suranga next to the Shri Sharadamba High School at Sheni, Kasargod is a delight to watch. It has seven air vents, a few of which have served as open wells as well. These vents provided crucial ventilation to the people who worked on the suranga, according to Shree Padre. The entire structure lies in a dilapidated condition.

The Bayar village in Kasargod has over 2,000 surangas. "Our family has been using the water from the suranga for generations. At present, we have eight surangas in our land. Many families use only suranga water in Bayar," says Giri Govind Bhat, a resident of the village.

"I have been using water from suranga to cultivate arecanut, coconut, cocoa, cinnamon, nutmeg and other crops in my farm land. The availability of water in these surangas has not declined in the last 60 years," he says with pride.

"Construction of suranga is a one-time investment," says Govinda Bhat from Manila village in Bantwal taluk "But now there are hardly any suranga diggers available. And unlike borewells, it cannot be done using machines," says Bhat, who has 22 water-yielding surangas in his 17-acre land.

Water from the surangas is channelled to five earthen tanks, and then for farming. Bhat says he has to go into the suranga to clear any roots that might disrupt the flow of water in the pipe laid there.

"My father, the late Manimoole Achyutha Bhat brought this traditional water harvesting system to the Manila village after having noticed it in Padre," Bhat says.

"In fact, he guided the labourers in and around Manila in the skill of digging suranga."

Now, 300 households depend on the structures for their daily water requirements.

Bhat says the government should support drilling surangas through Mahatma Gandhi National Rural Employment Guarantee Scheme (MGNREGS) and other schemes as they are sustainable, do not affect groundwater table and require no electricity.

Bengaluru

ಸಮಸ್ಯೆಗಳು ಬಂದಾಗ ಹಿಂಜರಿದು ಕೂರುವ ಬದಲು ಅದಕ್ಕೆ ಪರಿಹಾರ ಏನಾದರೂ ಇದೆಯೇ ಎಂದು ಹುಡುಕುವುದು ಮನುಷ್ಯನ ಮೂಲಭೂತ ಗುಣಗಳಲ್ಲಿ ಒಂದು. ಅದಿಲ್ಲವಾದಲ್ಲಿ ಮನುಕುಲ ಪ್ರಗತಿ ಸಾಧಿಸುತ್ತಲೇ ಇರಲಿಲ್ಲ. ಯುದ್ಧಕ್ಕೆ ಬೆನ್ನು ಹಾಕಿದರೆ ಸಮರ ಗೆಲ್ಲುವುದಾದರೂ ಹೇಗೆ! ಕೃಷಿಗೂ ಇದು ಅನ್ವಯ.

ಅಡಕೆ ಕೊಯ್ಯಲು ದೋಟಿ, ಅಡೆತಡೆಗಳನು ದಾಟಿ...

ಕೃಷಿಯ ತಾಕತ್ತೇ ಅದು. ಯಾರು ಏನೇ ಅನ್ನಲಿ, ದೊಡ್ಡ ನೌಕರಿಯಂತಹ ಕಣ್ಣುಕೋರೈಸುವ ಇಮೇಜು ಇಲ್ಲದೆ ಇರಲಿ, ಕೃಷಿಕನಿಗೆ ಹೆಣ್ಣುಕೊಡುವುದಿಲ್ಲ ಎಂಬ ಮನಸ್ಥಿತಿ ಇರಲಿ, ಕೃಷಿ ಮಾತ್ರ ತನ್ನ ಮೂಲಗುಣ ಬಿಡುವುದಿಲ್ಲ. ಅದು ಈ ನೆಲದ ವಿಶೇಷತೆ, ಸಂಸ್ಕೃತಿ. ಕೃಷಿಪ್ರೀತಿಯೊಂದಿದ್ದರೆ ಸಾಕು, ಬರಡುನೆಲದಲ್ಲೂ ನೀರು ಜಿನುಗಿಸಬಹುದು; ಕಲ್ಲಿನ ನಡುವೆಯೂ ಗಿಡ ಚಿಗುರಿಸಬಹುದು. ಹಾಗಿಲ್ಲವಾದಲ್ಲಿ, ಸಾಲದ ಕಾರಣಕ್ಕಾಗಿ ಆತ್ಮಹತ್ಯೆ ಯೋಚನೆ ಮಾಡಿದ್ದ ಶಿಕಾರಿಪುರದ ಸಾಸರವಳ್ಳಿಯ ರುದ್ರಪ್ಪ ಅಂಗಡಿ, ನಂತರದಲ್ಲಿ ಸಮಗ್ರ ಕೃಷಿ ಮಾಡಿ ಇಂದು ಹಸನು ಜೀವನ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಅಂಗಡಿಯವರನ್ನು ಬೆಂಗಳೂರಿನ ತಮ್ಮ ಕಚೇರಿಗೆ ಕರೆಸಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಸರ್ಕಾರವೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎಂಬುದು ಒಪ್ಪತಕ್ಕ ಮಾತು. ಹಾಗಿದ್ದೂ, ಸರ್ಕಾರಗಳು ಸಾಕಷ್ಟು ಕೃಷಿ ಯೋಜನೆಗಳನ್ನು ಸಹ ತರುತ್ತಿವೆ ಎಂಬುದನ್ನೂ ಒಪ್ಪಬೇಕು. ಆದರ ಜತೆಗೆ, ಸರ್ಕಾರದಲ್ಲಿರುವವರು ಸಚಿವ ಬಿ.ಸಿ. ಪಾಟೀಲರು ಮಾಡಿದಂತೆ, ವಿಶಿಷ್ಟ ಸಾಧನೆಗೈದ ರೈತರನ್ನು ಗುರುತಿಸಿ ಬೆನ್ನುತಟ್ಟುವ ಕೆಲಸ ಮಾಡಿದರೆ ಉಳಿದವರಿಗೂ ಒಂದು ಪ್ರೇರಣೆ, ಪ್ರೋತ್ಸಾಹ ನೀಡಿದಂತಾಗುತ್ತದೆ.



ಯಲ್ಲಾಪುರ ತಾಲೂಕಿನ ಹಿರೇಸರ ಎಂಬುದು ನನ್ನ ಅಜ್ಜನಮನೆ. ಅದು ಹತ್ತು ಹನ್ನೆರಡು ಮನೆಗಳ ಊರು (ಈಗ ಈ ಸಂಖ್ಯೆಯಲ್ಲಿ ವ್ಯತ್ಯಾಸ ಆಗಿರಬಹುದು. ಅದು ಬೇರೆ ಮಾತು. ಜತೆಗೆ ಚಿಕ್ಕವರಿದ್ದಾಗ ಅಜ್ಜನ ಮನೆಯಲ್ಲಿನ ನೆನಪುಗಳ ಕಣಜ ಬೇರೆಯದೇ ಒಂದು ಲೋಕ! ಓರಗೆಯ ಹುಡುಗರು ಮಾಡುವ ಆಟ ತುಂಟಾಟಗಳು, ಹೊಳೆಯಲ್ಲಿ ಈಜಲು ಹೋಗಿ ಬೈಸಿಕೊಳ್ಳುವುದು, ಯಾರದಾದರೂ ವಾಹನದ ಗಾಳಿ ತೆಗೆಯುವುದು... ಇವನ್ನೆಲ್ಲ ಮರೆಯುವುದು ಸಾಧ್ಯವೇ?). ಮುಂಚೆ ಅಲ್ಲಿಗೆ ಅಡಕೆ ಕೊಯ್ಯಲು ಬರುತ್ತಿದ್ದವರು ಕುಮಟಾ ಕಡೆಯವರು. ಅಡಕೆ ಸೀಸನ್ ಬಂದಾಗ ಅವರಿಗೆ ಪತ್ರ ಬರೆದು ಬರಲು ತಿಳಿಸಲಾಗುತ್ತಿತ್ತು. ಅವರು ಇಂಥ ದಿನ ಬರುತ್ತೇವೆ ಎಂದು ಪ್ರತ್ಯುತ್ತರ ಬರೆಯುತ್ತಿದ್ದರು. ಮೂರ್ನಾಲ್ಕು ಮಂದಿಯ ಟೀಮ್ ಬರುತ್ತಿತ್ತು. ಇವರಿಗೆ ಬಹುತೇಕವಾಗಿ ನನ್ನ ಅಜ್ಜನಮನೆ ಅಥವಾ ಸಣ್ಣಜ್ಜನ (ಅಜ್ಜನ ಸೋದರ) ಮನೆಯ ಚೌಕಿಮನೆಯಲ್ಲಿ ವಸತಿ ವ್ಯವಸ್ಥೆ ಮಾಡಲಾಗುತ್ತಿತ್ತು. ಆ ಊರಿನ ಎಲ್ಲರ ತೋಟದ ಅಡಕೆ ಕೊಯ್ಯುವವರು ಇವರೇ. ಯಾವ ದಿನ ಯಾರ ಮನೆಯ ಬಾರಿ ಇರುತ್ತದೆಯೋ ಆ ದಿನ ಅವರ ಮನೆಯಲ್ಲಿ ಊಟ. ಸಮಯ ಇದ್ದರೆ ಅಕ್ಕಪಕ್ಕದ ಊರಿಗೂ ಹೋಗುತ್ತಿದ್ದರು. ಅಡಕೆ ಕೊಯ್ಲು ಹಂಗಾಮು ಮುಗಿಸಿಯೇ ಊರಿಗೆ ವಾಪಸಾಗುತ್ತಿದ್ದುದು. (ಅನಾರೋಗ್ಯ ಇನ್ನಿತರ ತುರ್ತು ಸಂದರ್ಭಗಳಲ್ಲಿ ಮಾತ್ರ ಮಧ್ಯಂತರದಲ್ಲಿ ಹೋಗುತ್ತಿದ್ದರು). ಎತ್ತರೆತ್ತರದ ಅಡಕೆ ಮರಗಳನೇರಿ ನಾಜೂಕಾಗಿ ಕೊನೆ ಕೊಯ್ಯು ಇಳಿಸುವ ಕಲೆ ಇವರಿಗೆ ಸಿದ್ಧಿಸಿತ್ತು. ಎಷ್ಟರಮಟ್ಟಿಗೆಂದರೆ ಇವರು ಅಡಕೆ ಮರವೇರಿ ಕೊನೆ ಕೊಯ್ಯುತ್ತಿದ್ದುದು ಭಾವಿಸಿ ನೋಡಿದ ಹೊರತು ಗೊತ್ತೇ ಆಗುತ್ತಿರಲಿಲ್ಲ. 'ಅವರು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹಾಗಾಗಿ ಆಯಾ ತೋಟದ ಸ್ವರೂಪ ಅವರಿಗೆ ಅರಿವಾಗುತ್ತಿತ್ತು. ಯಾವ ಮರ ಲಡ್ಡಾಗಿದೆ, ಯಾವ ಮರ ಗಟ್ಟಿ ಇದೆ ಎಂಬುದರ ಅಂದಾಜಿರುತ್ತಿತ್ತು. ಅಲ್ಲದೆ, ಅನೇಕ ವರ್ಷಗಳಿಂದ ಕೊನೆ ಕೊಯ್ಯುತ್ತಿದ್ದುದರಿಂದ ಚೆನ್ನಾಗಿ ಪರಿಚಯ ಇರುತ್ತಿತ್ತು' ಎನ್ನುತಾರೆ, ಹಿರೇಸರದ ಜನಾರ್ದನ ಹೆಗಡೆ. ಆದರೆ ಕಾಲಚಕ್ರದ ಓಟಕ್ಕೆ ಈ ವೃತ್ತಿಯೂ ಸಿಲುಕಿ ಅಲ್ಲಿ ಸಹ ಹೊಸದಾಗಿ ಕಲಿಯುವವರು ಕಡಿಮೆಯಾದರು; ಇವರಿಗೆ ವಯಸ್ಸಾಯಿತು. ಹೀಗಾಗಿ ಈಗ ಅಲ್ಲಿಂದ ಬರುವವರ ಸಂಖ್ಯೆ ಬಹುತೇಕ ಕಡಿಮೆಯಾಗಿದೆ. ಸ್ಥಳೀಯವಾಗಿಯೇ ಕೊನೆ ಕೊಯ್ಯುವವರು ತಯಾರಾಗಿದ್ದಾರೆ. ಆದರೆ ಎಷ್ಟು ಸಂಖ್ಯೆಯಲ್ಲಿ ಬೇಕೋ ಅಷ್ಟು ಸಂಖ್ಯೆಯಲ್ಲಿ ಇಲ್ಲ. ಒಂದೇ ಸಮಯದಲ್ಲಿ ಎಲ್ಲರೂ ಅಡಕೆ ಕೊಯ್ಲು ಮಾಡಬೇಕಾದುದರಿಂದ ಕಾರ್ಮಿಕರ ತುಟಾಗ್ರತೆ ಕಾಡುತ್ತದೆ. ಅದರಲ್ಲೂ ಕೊನೆ ಕೊಯ್ಲು ದೊಡ್ಡ ಸಮಸ್ಯೆಯಾಗಿ ಮಾರ್ಪಟ್ಟಿದೆ. ನೆಲದ ಮೇಲಿನ ಕೆಲಸವಾದರೆ ಹೇಗೋ ಮಾಡಿಬಿಡಬಹುದು. ಆದರೆ 60, 70, 80 ಅಡಿ ಎತ್ತರ ಬೆಳೆಯುವ ಅಡಕೆ ಮರವನ್ನು ಏರಿ ಕೊನೆ ಕೊಯ್ಯುವುದು ಸುಲಭದ ಮಾತಲ್ಲ. ಜತೆಗೆ, ಬಾಗುವ, ಬಳುಕುವ ಮರದಿಂದ ಮರಕ್ಕೆ ದಾಟುತ್ತ ಕೊನೆ ಇಳಿಸುವುದು ಯಾವ ಕಸರತ್ತಿಗೂ ಕಡಿಮೆಯಲ್ಲ. ಆ ಕೆಲಸಕ್ಕೆ ಧೈರ್ಯ, ತಾಕತ್ತು, ಏಕಾಗ್ರತೆ ಇವೆಲ್ಲ ಬೇಕಾಗುತ್ತದೆ. ಅದರಲ್ಲೂ ಈ ಸಲ ಕೊನೆಕೊಯ್ಯುವವರು ಮರದ ಮೇಲಿಂದ ಬಿದ್ದು ಸಾವನ್ನಪ್ಪಿದ-ಗಾಯಗೊಂಡ ಎರಡು ಮೂರು ಘಟನೆಗಳು ನಡೆದಿದ್ದು ಖೇದಕರ ಸಂಗತಿ. ಕೃಷಿಕರ ವಲಯದಲ್ಲಿ ಇದು ಗಾಢ ವಿಷಾದ ಮೂಡಿಸಿದೆ.

ಕೊನೆಗೌಡರಿಗೆ (ಅಡಕೆ ಬೆಳೆಯುವ ಪ್ರದೇಶದಲ್ಲಿ ಕೊನೆ ಕೊಯ್ಯುವವರಿಗೆ ಹೀಗೆ ಕರೆಯುವುದು ವಾಡಿಕೆ. ಇದು ಜಾತಿವಾಚಕವಲ್ಲ) ಸೀಸನ್‌ನಲ್ಲಿ ಬಹು ಬೇಡಿಕೆ. ಎಷ್ಟರಮಟ್ಟಿಗೆಂದರೆ, ಕೊನೆ ಕೊಯ್ಯುವವರನ್ನು ಪಕ್ಕಾ ಮಾಡಿಕೊಂಡು ಇತರ ಕೆಲಸಗಾರರಿಗೆ ಹೇಳಿ ಕಾಯಬೇಕು. ಎಷ್ಟೋ ವೇಳೆ ಎಲ್ಲರೂ ಕಾಯುತ್ತ ಇರುತ್ತಾರೆ, ಕೊನೆ ಕೊಯ್ಯುವವ ಬರುವುದೇ ಇಲ್ಲ. ಬೇರೆ ಯಾವುದೋ ಮನೆಗೆ ಹೋಗಿರುತ್ತಾನೆ ಅಥವಾ ಮತ್ತೆನೋ ತೊಂದರೆ. ಕೊನೆಗೆ ಕಾದುಕಾದು ಆ ಮನೆಯವರು ಬೇರೆ ಕೆಲಸಕ್ಕೆ ಹೋಗುತ್ತಾರೆ.

ಸಮಸ್ಯೆಗಳು ಬಂದಾಗ ಹಿಂಜರಿದು ಕೂರುವ ಬದಲು ಅದಕ್ಕೆ ಪರಿಹಾರ ಏನಾದರೂ ಇದೆಯೇ ಎಂದು ಹುಡುಕುವುದು ಮನುಷ್ಯನ ಮೂಲಭೂತ ಗುಣಗಳಲ್ಲಿ ಒಂದು. ಅದಿಲ್ಲವಾದಲ್ಲಿ ಮನುಕುಲ ಪ್ರಗತಿ ಸಾಧಿಸುತ್ತಲೇ ಇರಲಿಲ್ಲ. ಯುದ್ಧಕ್ಕೆ ಬೆನ್ನು ಹಾಕಿದರೆ ಸಮರ ಗೆಲ್ಲುವುದಾದರೂ ಹೇಗೆ! ಕೃಷಿರಂಗಕ್ಕೂ ಈ ಮಾತ ಅನ್ವಯ. ಅಡಕೆ ಸುಲಿಯುವವರ ಸಮಸ್ಯೆ ಆದಾಗ ಯಂತ್ರಗಳ ಅವಿಷ್ಕಾರವಾಗಿ ತಕ್ಕಮಟ್ಟಿಗೆ ಪರಿಹಾರ ದೊರಕಿದೆ. ಹಾಗಂತ ಪೂರ್ತಿಯಾಗಿ ಬಗೆಹರಿದಿದೆ ಅಂತಲ್ಲ. ಈಗ ಕೊನೆ ಕೊಯ್ಯುವ ಕಾರ್ಬನ್ ದೋಟಿ ಬಂದಿದ್ದು, ಬಂದ ಹೊಸದರಲ್ಲಿಯೇ ಇದು ಕೃಷಿಕರ ವಲಯದಲ್ಲಿ ಸಂಚಲನವನ್ನೇ ಮೂಡಿಸಿದೆ. ಇದೇ ಮೊದಲ ಬಾರಿಗೆ ದೋಟಿಯಲ್ಲಿ ಕೊನೆ ಕೊಯ್ದವರು ಸಹ 'ಭಾರಿ ಚಲೋ ಇದ್ರಾ...' ಎಂದು ಶ್ಲಾಘಿಸುತ್ತಿದ್ದಾರೆ. 60, 70, 80 ಅಡಿ ಹೀಗೆ ಬೇರೆ ಬೇರೆ ಎತ್ತರಕ್ಕೆ ಏರುವ ಸಾಮರ್ಥ್ಯದ ದೋಟಿಗಳು ಲಭ್ಯ. ಪ್ರತಿ ಅಡಿಗೆ ಸುಮಾರು 1 ಸಾವಿರ ರೂ. ಬೆಲೆಯಾಗುತ್ತದೆ. ಫೋಲ್ಡಿಬಲ್ ಆದುದರಿಂದ ಬೇಕಾದ ಎತ್ತರಕ್ಕೆ ಏರಿಳಿತ ಮಾಡಬಹುದು. ಸಾಗಾಟವೂ ಕಷ್ಟವಲ್ಲ.

ಟಿಎಸ್‌ಎಸ್ ಸಹಯೋಗದಲ್ಲಿ ಈಗಾಗಲೇ ಕಾರ್ಬನ್ ದೋಟಿ ಮೂಲಕ ವಿವಿಧೆಡೆ ಅಡಕೆ ಕೊನೆ ಕೊಯ್ಲು ತರಬೇತಿ ನಡೆಸಲಾಗುತ್ತಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಕೂಲಿಕಾರರ ಸಮಸ್ಯೆ ಎದುರಿಸಲು ದೋಟಿ ಕೊಯ್ಲು ಉತ್ತಮ ವ್ಯವಸ್ಥೆಯಾಗಿದೆ. ಸಂಸ್ಥೆ ಮತಿಯಿಂದ ಮೊದಲ ಹಂತದಲ್ಲಿ 50ರಿಂದ 70 ಜನರಿಗೆ ತರಬೇತಿ ನೀಡಲಾಗುತ್ತಿದೆ. ಮುಂಬರುವ ವರ್ಷದಲ್ಲಿ 500ರಷ್ಟು ನುರಿತ ಜನರನ್ನು ಈ ವ್ಯವಸ್ಥೆಯಲ್ಲಿ ತೊಡಗಿಸುವ ಗುರಿಯಿದೆ. ಆಸಕ್ತಿಯಿರುವ ಹಾಗೂ ಕೌಶಲ ಇರುವವರು ದೋಟಿ ಮೂಲಕ ಸ್ವತಃ ಕೊನೆ ಕೊಯ್ಲು ಕೂಡ ಮಾಡುವುದರಿಂದ ಕಾರ್ಮಿಕರ ಮೇಲಿನ ಅವಲಂಬನೆ ತಪ್ಪುತ್ತದೆ. ಶೀಘ್ರ ಹಾಗೂ ಅಪಾಯರಹಿತ ಕೊನೆ ಕೊಯ್ಲಿಗೆ ಇದು ಅನುಕೂಲವಾಗಿದೆ. ಸಂಸ್ಥೆಯಿಂದ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ದೋಟಿಯನ್ನು ರಿಯಾಯಿತಿ ದರದಲ್ಲಿ ಕೂಡ ಕಲ್ಪಿಸಲು ಚಿಂತನೆ ನಡೆಸಲಾಗಿದೆ.

| ರವೀಶ ಹೆಗಡೆ ಟಿಎಸ್‌ಎಸ್ ಪ್ರಧಾನ ವ್ಯವಸ್ಥಾಪಕ



ದಿಕ್ಸೂಚಿ

ನಾಗರಾಜ ಇಳೆಗುಂಡಿ
mantanavijayavani@gmail.com
ilegundi@gmail.com

ಇದನ್ನು ಎಲ್ಲರಿಗೂ ವ್ಯಕ್ತಿಗತವಾಗಿ ತಂದಿಟ್ಟುಕೊಳ್ಳುವುದು ಕಷ್ಟ. ಈಗ ಸಹಕಾರ ಸಂಘಗಳ ಮೂಲಕ ತರಬೇತಿ ನೀಡಿ ದೋಟಿ ಒದಗಿಸಿ ಕೊನೆ ಕೊಯ್ಯುವ ಕೆಲಸ ಅನೇಕ ಕಡೆ ನಡೆಯುತ್ತಿದೆ. ಶಿರಸಿಯ ಟಿಎಸ್‌ಎಸ್, ಟಿಎಂಎಸ್ ಮುಂತಾದ ಬೃಹತ್ ಸಂಘಗಳಲ್ಲದೆ, ಯಡಳ್ಳಿ, ಭೈರುಂಬೆ, ವಾನಳ್ಳಿ...ಹೀಗೆ ಆಯಾ ಭಾಗದ ಸಹಕಾರ ಸಂಘಗಳ ಮೂಲಕ ಆಸಕ್ತರಿಗೆ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ. ಹೀಗೆ ತರಬೇತಿ ಪಡೆದವರು ಬೇಡಿಕೆ ಬಂದಲ್ಲಿ ಹೋಗಿ ಕೊನೆ ಕೊಯ್ಯುತ್ತಾರೆ. ಒಂದು ಕೊನೆಗೆ ಇಂತಿಷ್ಟು ಎಂದು ಶುಲ್ಕವಿದೆ. ಕುಶಲ ಕೆಲಸಗಾರರು ದಿನಕ್ಕೆ 600, 700 ಕೊನೆ ಕೊಯ್ಯಬಲ್ಲರು. ದಿನಕ್ಕೆ ಸಾವಿರ ಕೊನೆ ಕೊಯ್ಯುವವರೂ ಇದ್ದಾರೆ. ತರಬೇತಿ ಇಲ್ಲದಿದ್ದರೆ ನಾಜೂಕಾಗಿ ಕೊಯ್ಯುವುದು ಕಷ್ಟ. ಏಕೆಂದರೆ, ಅಡಕೆ ಕೊನೆ ಮೆಣಸಿನಬಳ್ಳಿ ಮೇಲೆ ಬಿದ್ದು ಬಳ್ಳಿ ಹಾಳಾಗುವ ಸಂಭವ ಇರುತ್ತದೆ. ಇದಲ್ಲದೆ, ಕೊನೆ ನೆಲಕ್ಕೆ ಬಿದ್ದರೆ ತೆರಿ ಅಡಕೆ (ಅಡಕೆ ಕೊನೆಯಿಂದ ಉದುರಿ ನೆಲಕ್ಕಿ ಬೀಳುವುದು) ಪ್ರಮಾಣ ಜಾಸ್ತಿಯಾಗಿ ಹೆಕ್ಕುವ ಕೆಲಸ ಹೆಚ್ಚುತ್ತದೆ. ಅಡಕೆ ಮರ ಏರಿ ಕೊನೆ ಕೊಯ್ಯುವವರಿಗೆ ಸಹ ನಾಜೂಕುತನ, ಪರಿಣತಿ ಇಲ್ಲದಿದ್ದರೆ ಕೊನೆಯನ್ನು ಹಗ್ಗದಲ್ಲಿ ಬಿಡುವುದಕ್ಕಿಂತ ನೆಲಕ್ಕೆ ಬೀಳಿಸುವುದೇ ಹೆಚ್ಚು. ಅಡಕೆ ಕೊನೆ ಕೊಯ್ಯುವುದಕ್ಕೆ ದೋಟಿ ಬ್ಯಾಲೆನ್ಸ್ ಮಾಡುವ ಪರಿಣತಿ ಮತ್ತು ಶಕ್ತಿ ಬೇಕಾಗುತ್ತದೆ. 50-60 ಅಡಿ ಎತ್ತರಕ್ಕೆ ಹೋದಾಗ ದೋಟಿ ಬಳುಕುತ್ತದೆ. ('ಬಿಂಕದ ಸಿಂಗಾರಿ ಮೈ ಡೊಂಕಿನ ವೈಯಾರಿ' ಎಂಬ ಸಿನಿಮಾ ಹಾಡಿನಂತೆ!) ಆಗ ಬ್ಯಾಲೆನ್ಸ್ ತಪ್ಪಿದರೆ ಅಡಕೆ ಸಿಂಗಾರಕ್ಕೆ ಸಹ ಪೆಟ್ಟಾಗುವ ಆಪಾಯ ಇರುತ್ತದೆ. ಅಡಕೆಯ ವಿಶೇಷ ಏನೆಂದರೆ ಮುಂದಿನ ಬೆಳೆ ಈಗಲೇ ನಿರ್ಧಾರವಾಗಿರುತ್ತದೆ. ಇದಲ್ಲದೆ ಏಲಕ್ಕಿ ಇತ್ಯಾದಿಗೂ ಪೆಟ್ಟು. ದೋಟಿಯಲ್ಲಿ ಕೊನೆ ಕೊಯ್ಯುವವ ಒಬ್ಬನಾದರೆ ನೆಲಕ್ಕೆ ಬರುವ ಕೊನೆ ಹಿಡಿಯಲು ಮತ್ತೊಬ್ಬ ಬೇಕು. ಅಡಕೆ ಕೊನೆ ಮೆಣಸಿನಬಳ್ಳಿ ಮೇಲೆ ಬೀಳದಂತೆ ಅಥವಾ ಮರಕ್ಕೆ ತಾಗಿ ಚೆದುರದಂತೆ ನಾಜೂಕಾಗಿ ಹಿಡಿಯುವ ಚಾಣಾಕ್ಷತೆ ಬೇಕಾಗುತ್ತದೆ. ಔಷಧ ಸಿಂಪಡಣೆಗೂ ಇದನ್ನು ಬಳಸಬಹುದು. ಕೊಯ್ಲು ಮಾಡುವಾಗ ದೋಟಿಗೆ ತುದಿಯಲ್ಲಿ ಕತ್ತಿ ಕಟ್ಟಲಾಗುತ್ತದೆ.

ಹಸಿ ಅಡಕೆಯನ್ನು ಕೊಯ್ದಿದರೆ ಮೂರ್ನಾಲ್ಕು ದಿನದಲ್ಲಿ ಸುಲಿದು ಬೇಯಿಸಿ, ಬಿಸಿಲಿನಲ್ಲಿ ಒಣಗಿಸುವ ಪ್ರಕ್ರಿಯೆ ವೇಗವಾಗಿ ನಡೆಯಬೇಕಾಗುತ್ತದೆ. ಕೆಲ ವರ್ಷಗಳಿಂದ ಅಡಕೆ ಸುಲಿಯುವವರ ಕೊರತೆ ಎದುರಾಗಿದ್ದು ಕೃಷಿಕರಿಗೆ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವಾಗಿ ಹಸಿ ಅಡಕೆಯನ್ನೇ ಖರೀದಿಸುವ ಪರಿಪಾಠ ಸಹ ಚಾಲ್ತಿಗೆ ಬಂದಿದೆ. ಶಿರಸಿಯ ಟಿಎಸ್‌ಎಸ್‌ನಂತಹ ಸಂಸ್ಥೆಗಳೇ ಈ ಕಾರ್ಯಕ್ಕೆ ಮುಂದಾಗಿವೆ. ಇದಲ್ಲದೆ, ಫಲಗುತ್ತಿಗೆಯಂತಹ ವ್ಯವಸ್ಥೆಯೂ ಅದಾಗಲೇ ಇದೆ. ಅಂದರೆ, ಗುತ್ತಿಗೆದಾರ ತೋಟದ ಫಸಲನ್ನು ಅಂದಾಜು ಮಾಡಿ, ಒಂದು ಬೆಲೆಕಟ್ಟಿ, ನಂತರ ಒಪ್ಪಂದ ಆದಮೇಲೆ ಕೊನೆ ಕೊಯ್ಲು ಮಾಡಿ ಫಸಲು ಒಯ್ದು ಬೇರೆ ಕಡೆ ಸಂಸ್ಕರಿಸುವುದು. ಈ ಕೆಲವು ಕ್ರಮಗಳಿಂದ ಕೃಷಿಯ ಮೂಲಸಂಸ್ಕೃತಿಗೆ, ಶ್ರಮಸಂಸ್ಕೃತಿಗೆ ಧಕ್ಕೆ ಆಗಬಹುದೆಂಬ ವಾದವನ್ನೂ ಕೆಲವರು ಮುಂದಿಡುತ್ತಾರೆ. ಆದರೆ, ಕೃಷಿ ಕಷ್ಟ ಎಂದು ತ್ಯಜಿಸುವುದಕ್ಕಿಂತ ಹೀಗಾದರೂ ಮಾಡಿ ಉಳಿಸಿಕೊಂಡು ಬರುವುದು ಉತ್ತಮವಲ್ಲವೆ ಎಂದು ಕೆಲವರು ಪ್ರತಿಪಾದಿಸುತ್ತಾರೆ. ಕೃಷಿ ಕುಟುಂಬಗಳು ಸಹ ಈಗ ಮೊದಲಿನಂತಿಲ್ಲ; ಜನರ ಸಂಖ್ಯೆ ಕಡಿಮೆಯಾಗುತ್ತಿದೆ; ಅವಿಭಕ್ತ ಕುಟುಂಬಗಳು ಹೆಚ್ಚಿವೆ. ಕೃಷಿ ಕಾರ್ಮಿಕರು ಮೊದಲಿನಷ್ಟು ಸಿಗುತ್ತಿಲ್ಲ. ಅಡಕೆ ಎಂದಲ್ಲ ಎಲ್ಲ ಬೆಳೆಗಳಿಗೂ ಬಹುತೇಕ ಇದೇ ಪರಿಸ್ಥಿತಿ. ಇಂಥ ಸನ್ನಿವೇಶದಲ್ಲಿಯೂ ಕೃಷಿ ಯಶಸ್ಸಿನ ಕತೆಗಳು ಬರುವುದು ಆಶಾದಾಯಕವೇ ಸರಿ...

ಕೊನೇ ಮಾತು: ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಬಗ್ಗೆ ಮೋದಿ ಸರ್ಕಾರ ಭಾರಿ ಭರವಸೆಗಳನ್ನು ನೀಡುತ್ತಿದೆ. ಹಾಗಾದಲ್ಲಿ ಉತ್ತಮವೇ. ಒಂದೊಮ್ಮೆ ವರಮಾನ ಹೆಚ್ಚದಿದ್ದರೆ ಕೃಷಿಪ್ರೀತಿ ಕಡಿಮೆಯಾಗದಿದ್ದರೆ ಸಾಕು!

(ಲೇಖಕರು 'ವಿಜಯವಾಣಿ' ಡೆಪ್ಯೂಟಿ ಎಡಿಟರ್)

ವಿದೇಶಗಳಿಗೆ ರಫ್ತಾಗದ ಕರುನಾಡಿನ ಗುಲಾಬಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರೋನಾ ಪ್ರಕರಣಗಳು ಕಡಿಮೆಯಾಗಿ ಅಂತಾರಾಷ್ಟ್ರೀಯ ವಿಮಾನಗಳ ಸಂಚಾರ ಆರಂಭವಾಗಿದೆ. ಸರಕಾರ ಕೂಡ ಕರೋನಾ ಮಾರ್ಗಸೂಚಿಗಳನ್ನು ಸಡಿಲಗೊಳಿಸಿದೆ. ಹೀಗಿದ್ದರೂ ಈ ಬಾರಿ ಪ್ರೇಮಿಗಳ ದಿನಕ್ಕೆ (ಫೆ.14) ಕರುನಾಡಿನ ಕೆಂಪು ಗುಲಾಬಿ ಹೊರ ರಾಷ್ಟ್ರಗಳಿಗೆ ಹೆಚ್ಚು ರಫ್ತಾಗುತ್ತಿಲ್ಲ.

ಈ ಬಾರಿ ವಿಮಾನ ಸರಕು ಸಾಗಣೆ ದರ ಶೇ. 30ರಷ್ಟು ಏರಿಕೆಯಾದ ಪರಿಣಾಮ ಪ್ರೇಮಿಗಳ ದಿನಕ್ಕಾಗಿ ಕೆಂಗುಲಾಬಿಗಳ ರಫ್ತು ಪ್ರಮಾಣ ಕುಸಿದಿದೆ. ಈಗಾಗಲೇ ಡಚ್ ಗುಲಾಬಿಗಳಿಗೆ ಹೊರ ರಾಷ್ಟ್ರಗಳಿಂದ ಬೇಡಿಕೆ ಬರಬೇಕಿತ್ತು. ಆದರೆ, ಈ ಬಾರಿ ವಿಮಾನ ದರ ಏರಿಕೆಯಾಗಿದ್ದರಿಂದ ರಫ್ತುದಾರರು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಪ್ರತಿ ವರ್ಷ 40-50 ಲಕ್ಷ ಗುಲಾಬಿ ಹೋಗುತ್ತಿದ್ದ ಜಾಗದಲ್ಲಿ ಈ ಬಾರಿ ಕೇವಲ 15-16 ಲಕ್ಷ ಗುಲಾಬಿ ಹೂಗಳು ಮಾತ್ರ ಹೋಗುವ ಸಾಧ್ಯತೆಯಿದೆ.

ಈ ಹಿಂದೆ ಒಂದು ಗುಲಾಬಿ ಹೂವನ್ನು ಹೊರದೇಶಕ್ಕೆ (ಜಪಾನ್) ಕಳುಹಿಸಲು 15ರು. ವೆಚ್ಚ ತಗಲುತ್ತಿತ್ತು. ಆದೇ ಹೂವಿಗೆ ಇಂದು ದುಪ್ಪಟ್ಟು (35-40 ರು.) ದರ ಇದೆ ಎನ್ನುತ್ತಾರೆ ರಫ್ತುದಾರರು.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಯೇ ವಿಮಾನ ದರ ಏರಿಕೆಗೆ ಪ್ರಮುಖ ಕಾರಣ. ಜತೆಗೆ ಕರೋನಾ ಹಿನ್ನೆಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ವಿಮಾನ ಹಾರಾಟವಿಲ್ಲದೆ ನಷ್ಟ ಅನುಭವಿಸಲಾಗಿತ್ತು. ಹೀಗಾಗಿ ದರ ಹೆಚ್ಚಾಗಿದೆ. ಜತೆಗೆ ವಿದೇಶಗಳಲ್ಲಿ ಈ ಹಿಂದಿನಂತೆ ಪ್ರೇಮಿಗಳ ದಿನ ಆಚರಣೆ ಯಲ್ಲಿ ಸಂಭ್ರಮದ ವಾತಾವರಣ ಇಲ್ಲದಿರುವು ದರಿಂದ ಈ ವರ್ಷ ರಫ್ತು ಪ್ರಮಾಣ ಕುಸಿದಿದೆ.

ಕಳೆದ ವರ್ಷ ಈ ಅವಧಿಯಲ್ಲಿ ಸುಮಾರು 10-15 ಲಕ್ಷ ಗುಲಾಬಿ ಹೂವುಗಳು ಹೊರ ರಾಷ್ಟ್ರಗಳಿಗೆ ರಫ್ತಾಗಿದ್ದವು. ಈ ಬಾರಿ ಶೇ. 10 ರಷ್ಟು ಹೆಚ್ಚು ಹೂವು ರಫ್ತಾಗಲಿದೆ ಎಂದು ಸೌತ್ ಇಂಡಿಯಾ ಫ್ಲೋರಿಕಲ್ಚರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಪಿ. ಜಗನ್‌ನಾಥ ರಾಜು ತಿಳಿಸಿದ್ದಾರೆ.

ಸ್ಥಳೀಯ ಮಾರುಕಟ್ಟೆಯಲ್ಲಿ ಗುಲಾಬಿಗೆ ಬೇಡಿಕೆ: ಈ ಬಾರಿ ಸ್ಥಳೀಯ ಮಾರುಕಟ್ಟೆಯಲ್ಲಿ ಗುಲಾಬಿ ಹೂವುಗಳಿಗೆ ಹೆಚ್ಚ